**ದಿ: 26-07-2024ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ವಾಟೀ ಸವಾಲು ಪ್ರತಿವಾದಿಯ ಪರ ಶ್ರೀ ಜಿ.ಎಸ್.ಕೆ.ಎಸ್. ವಕೀಲರಿಂದ :**

ವಾದಿ ನಮ್ಮ ಓಣಿಯಲ್ಲಿರುವ ಕಾರಣ ಪರಿಚಯವಿದೆ. ಅವರ ಜೊತೆ ನಮ್ಮ ಒಡನಾಟ ಚೆನ್ನಾಗಿದೆ ಸ್ನೇಹಿತರಾಗಿದ್ದೇವೆ. ವಾದಿ Scrap ವ್ಯವಹಾರ ನಡೆಸುತ್ತಾರೆ. ಪ್ರತಿವಾದಿ ಸಹ ಕೊಪ್ಪಳದ ವಾಸಿ. ಕ್ರಯದ ಮಾತುಕತೆ ಮೊದಲ ಬಾರಿಗೆ ಕೊಪ್ಪಳದ ಪ್ರತಿವಾದಿಯ ಮನೆಯಲ್ಲಿ ನಡೆದಿದೆ. ಆ ಸಂದರ್ಭದಲ್ಲಿ ವಾದಿ ಮತ್ತು ಪ್ರತಿವಾದಿ ಹಾಗೂ ಸಾಕ್ಷಿಗಳು ಅಲ್ಲದೇ ವಾದಿ ಮತ್ತು ಪ್ರತಿವಾದಿಗಳ ತಂದೆ ಇದ್ದರು. ಆ ಸಂದರ್ಭದಲ್ಲಿ ದಾವಾ ಸ್ವತ್ತಿನ ದಾಖಲೆಗಳನ್ನು ತೋರಿಸಿರುತ್ತಾರೆ. ಮಾತುಕತೆಯಾದ ದಿನ ದಾಖಲೆ ಮಾಡಿಕೊಂಡಿಲ್ಲ. ಆದರೆ ಒಂದು ಸಾವಿರ ರೂಪಾಯಿ ಹಣ ನಗದಾಗಿ ಕೊಟ್ಟಿದ್ದರು. ಆದರೆ ಅದರ ಬಗ್ಗೆ ದಾಖಲೆ ಮಾಡಿಕೊಂಡಿಲ್ಲ. ಮಾತುಕತೆ ದಿನ ಎಷ್ಟು ಸಮಯದಲ್ಲಿ ಕ್ರಯ ಪತ್ರ ಮಾಡಿಕೊಳ್ಳಬೇಕು ಎಂದು ನಿರ್ಧಾರವಾಗಿಲ್ಲ, ಅನುಕೂಲವಾದಾಗ ಮಾಡಿಕೊಳ್ಳಲು ನಿರ್ಧರಿಸಲಾಯಿತು. ಪ್ರತಿವಾದಿ ಸಮಯ ಬೇಕೆಂದು ಕೇಳಿರುತ್ತಾರೆ. ವಾದಿ ಹಣ ಕೊಡಲು ಸಿದ್ಧರಿದ್ದರು. ಕ್ರಯ ನೊಂದಾಯಿಸಿಕೊಳ್ಳಲು ಅವಶ್ಯಕ ಎಲ್ಲಾ ದಾಖಲೆಗಳು ಇದ್ದವು. ಹಾಗಾಗಿ ನೊಂದಣಿ ಮಾಡಿಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ.

ನಿ.ಪಿ-1ರ ಕರಾರು ಪತ್ರವನ್ನು ಕುಂದಾಪುರ ನೊಂದವಣಾಧಿಕಾರಿಗಳ ಕಚೇರಿಯಲ್ಲಿ ನೊಂದಣಿಯಾಗಿದೆ. ಸದರಿ ಕರಾರು ಪತ್ರವನ್ನು ಬಾಂಡ್ ಪೇಪರ್ ಮಾರಾಟ ಮಾಡುವವರ ಕಚೇರಿಯಲ್ಲಿ ಮುದ್ರಿಸಲಾಯಿತು. ಮುದ್ರಾಂಕ ಕಾಗದವನ್ನು ಎಲ್ಲಿ ಖರೀದಿಸಲಾಯಿತು ಎಂದು ಗೊತ್ತಿಲ್ಲ. ಕರಾರು ಪತ್ರ ತಯಾರಿಸುವಾಗ ನಾನು ಇರಲಿಲ್ಲ, ತಯಾರು ಮಾಡಿ ತೆಗೆದುಕೊಂಡು ಬಂದಿರುತ್ತಾರೆ. ಸದರಿ ನಿ.ಪಿ - 1ರಲ್ಲಿ ಬರೆದಿರುವ ಹಣಕಾಸಿನ ವ್ಯವಹಾರದ ಬಗ್ಗೆ ವಾದಿ ಮತ್ತು ಪ್ರತಿವಾದಿ ಮಾಹಿತಿ ನೀಡಿರುತ್ತಾರೆ. ಆದರೆ ನನಗೆ ಖುದ್ದು ಮಾಹಿತಿ ಇಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಸಹ ಕುಂದಾಪುರದಲ್ಲಿ ಕುಂದಾಪುರ ನೊಂದವಣಾಧಿಕಾರಿಗಳ ಕಚೇರಿಯ ಹೊರಗಡೆ ತಯಾರಿಸಲಾಯಿತು. ಸದರಿ ವಿಚಾರಣಾ ಪ್ರಮಾಣ ಪತ್ರದಲ್ಲಿ ನಾವು ನಾಲ್ಕು ಜನ ಸೇರಿ ಮಾಹಿತಿ ನೀಡಿರುತ್ತೇವೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಕಾಣಿಸಿದ ಹಣವು ಪ್ರತಿವಾದಿಯ ಖಾತೆಗೆ ಜಮಾವಾಗಿಲ್ಲ ಎಂದರೆ ಸಾಕ್ಷಿಯು ಅವರು ಹೇಳಿದವರಿಗೆ ಹಾಕಲಾಗಿದೆ ಎನ್ನುತ್ತಾರೆ. ವಾದಿ ಮತ್ತು ಪ್ರತಿವಾದಿಗೆ ವ್ಯವಹಾರ ಸಂಬಂಧ ಇರುವ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ

ಕಾಣಿಸಿದ ಹಣವು ವಾದಿ ಕೋಳಿಮೊಟ್ಟೆ ಮತ್ತು ಮೆಕ್ಕೆ ಜೋಳ ಖರೀದಿಸಿದ ಬಾಬ್ತು ಸಂಬಂಧ ಹಣ ಎಂದರೆ ಸಾಕ್ಷಿಯು ಪ್ರತಿವಾದಿ ಯಾರ ಖಾತೆಗೆ ಹೇಳಿರುತ್ತಾರೆ, ಅವರ ಖಾತೆಗೆ ಹಾಕಿದ್ದಾರೆ ಎನ್ನುತ್ತಾರೆ. ನಿಖರವಾಗಿ ಯಾವಾಗ ಹಣ ಹಾಕಿದ್ದಾರೆ ಎಂದು ಗೊತ್ತಿಲ್ಲ, ಆದರೆ 2021ರಒಂಬತ್ತನೇ ತಿಂಗಳಲ್ಲಿ ಹಾಕಿರುತ್ತಾರೆ. ವಾದಿ ಇಂತಿ ಇಂತವರಿಗೆ ಹಣ ಹಾಕು ಎಂದು ಪ್ರತಿವಾದಿ ಕೇಳುತ್ತಿದ್ದಾರೆ ಎಂದು ನನಗೆ ದೂರವಾಣಿ ಮುಖಾಂತರ ತಿಳಿಸಿರುತ್ತಾರೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ವಾದಿಯ ಮಾಹಿತಿ ಮೇರೆಗೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ - 1ರ ಕರಾರು ಬೇರೆ ವ್ಯವಹಾರಕ್ಕೆ ಸಂಬಂಧಿಸಿದ್ದು, ದಾವಾ ಸ್ವತ್ತಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಕುಂದಾಪುರ**